ದಿಃ 26-03-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರ ಪರ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನ್ನ ಮಾಹಿತಿ ಪ್ರಕಾರ ಸತ್ಯ ಮತ್ತು ಸರಿಯಾಗಿರುತ್ತವೆ . ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

**ಎದುರುದಾರು ಯಾವುದೇ ದಸ್ತಾವೇಜನ್ನುಹಾಜರುಪಡಿಸಿರುವುದಿಲ್ಲ.**

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಿಂದ**

ಎದುರುದಾರರು ನನಗೆ ಸುಮಾರು 35 ವರ್ಷಗಳಿಂದ ಪರಿಚಯ ಇರುತ್ತಾರೆ. ಅರ್ಜಿದಾರ ಹಾಗೂ ಎದುರುದಾರರ ಮದುವೆಯ ಆಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಂತರದ ದಿನಗಳಲ್ಲಿ ಅವರು ಬಾಡಿಗೆ ನಾತಿಯ ಮೇಲೆ ನಮ್ಮ ಮನೆ ಬಳಿ ಇದ್ದರು ಎಂದು ನುಡಿಯುತ್ತಾರೆ. ಸದರಿ ಎದುರುದಾರನಿಗೆ ಎರಡು ಪತ್ನಿಯರಿರುತ್ತಾರೆ. ಮೊದಲನೆ ಪತ್ನಿಯಾದ ಅರ್ಜಿದಾರಳಿಗೆ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಎರಡನೇ ಪತ್ನಿಗೆ ಒಂದು ಹೆಣ್ಣು ಮತ್ತು ಗಂಡು ಸಂತಾನ ಇರುತ್ತದೆ. ಎರಡೂ ಪತ್ನಿಯರು ಖಾಸ ಅಕ್ಕತಂಗಿ ಆಗಬೇಕು ಎಂದರೆ ಸರಿ.

ನಾನು ಸಾಕ್ಷಿ ಪ್ರ.ಪತ್ರವನ್ನು ಓದಿ ರುಜು ಮಾಡಿರುತ್ತೇನೆ ಎಂದರೆ ಸರಿ. ನಾನು ಎರಡು ಬಾರಿ ಪಂಚಾಯತಿಯನ್ನು ಎದುರುದಾರನ ಮನೆಯಲ್ಲಿ ಮಾಡಿದ್ದು ಇರುತ್ತದೆ. ಆ ಸಮಯದಲ್ಲಿ ಎದುರುದಾರನ ಎರಡೂ ಪತ್ನಿಯರೂ ಜೊತೆಯಲ್ಲಿ ವಾಸ ಮಾಡುವ ಸಮಯದಲ್ಲಿಯೇ ಪಂಚಾಯತಿ ಮಾಡಿದ್ದು ಇರುತ್ತದೆ ಎಂದರೆ ಸರಿ. ಪಂಚಾಯತಿ ಕಾಲಕ್ಕೆ 4 ಜನ ಉಪಸ್ಥಿತರಿದ್ದೆವು. ಎದುರುದಾರರು ಬಿ.ಎಸ್.ಎನ್.ಎಲ್. ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಸದರಿ ಎದುರುದಾರರು ಸ್ವ ಇಚ್ಛೆಯಾಗಿ ನಿವೃತ್ತಿಯಾಗಿರುತ್ತಾರೆ ಎಂದರೆ ಸರಿ.

ನಿವೃತ್ತಿ ನಂತರ ಬಂದ ಹಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅರ್ಜಿದಾರ ಮತ್ತು ಎದುರುದಾರನು ಪ್ರತ್ಯೇಕವಾಗಿ ವಾಸ ಮಾಡುತ್ತಾರೆ. ಎದುರುದಾರರು ಅರ್ಜಿದಾರಳಿಗೆ ನೀಡಿರುವ ಕಿರುಕುಳದ ಕುರಿತು ನನಗೆ ಮಾಹಿತಿ ಇರುತ್ತದೆ. ನಾನು ಪದೇ ಪದೇ ನ್ಯಾಯಾಲಯಕ್ಕೆ ತಿರುಗುತ್ತೇನೆ ಎಂದರೆ ಸರಿ. ನಾನು ಸುಮಾರು ಪ್ರಕರಣಗಳಲ್ಲಿ ಸಾಕ್ಷಿದಾರನಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಎದುರುದಾರನ ಸಂಸಾರದ ಕುರಿತು ವೈಯುಕ್ತಿಕ ಮಾಹಿತಿ ಇಲ್ಲದಿದ್ದರೂ ಸಹ ಎದುರುದಾರನ ಮಾತನ್ನು ಕೇಳಿಕೊಂಡು ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

ಎದುರುದಾರನು ನಿವೃತ್ತಿಯ ಬಳಿಕ ಏನು ಮಾಡುತ್ತಿದ್ದಾನೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಎದುರುದಾರನಿಗೆ ಎಷ್ಟು ಪಿಂಚಣಿ ಹಣ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಎದುರುದಾರನು ದೈಹಿಕವಾಗಿ ಸಮರ್ಥನು ಹಾಗೂ ಆರೋಗ್ಯವಂತನು ಇರುತ್ತಾನೆ ಎಂದರೆ ಸರಿ. ನನ್ನ ಸಾಕ್ಷ ಪ್ರ.ಪತ್ರದಲ್ಲಿ ಎದುರುದಾರನಿಗೆ ಸಾಲವಿರುತ್ತದೆ ಬಡ್ಡಿ ಕಟ್ಟುತ್ತಿರುತ್ತಾನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಅದರ ವಿಶ್ಲೇಷಣೆಯನ್ನು ನಾನು ನಿರ್ದಿಷ್ಟವಾಗಿ ಹೇಳಿರುವುದಿಲ್ಲ ಎಂದರೆ ಸರಿ. ಅರ್ಜಿದಾರಳಿಗೆ ಪೋಟಗಿ ಕೊಡುವ ಉದ್ದೇಶವನ್ನು ತಪ್ಪಿಸಲು ನನ್ನಿಂದ ಸಾಕ್ಷವನ್ನು ನುಡಿಯಲು ಎದುರುದಾರನು ಕೇಳಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧಿಕಾರಿಗಳು, ಶಹಾಬಾದ